"ನೀವು ಹೇಳಿದ್ದನ್ನು ಕೇಳಿ ಈಗ ನನಗೆ ಹೆದರಿಕೆ ಆಗುತ್ತಿದೆ, ಏನಿರಬಹುದು ಅದರಲ್ಲಿ?"

ಪರ್ಸಿವಲ್ ತನ್ನ ಒಣಗಿದ ಗಂಟಲಿಂದ ಕಷ್ಟಪಟ್ಟು ತೊದಲಿದ, "ಇಲ್ಲ ಇಲ್ಲ ಫೀನಿಕ್ಸ್ ನೀನು... ನೀನು... ಧೈರ್ಯ... ಧೈರ್ಯ... ವಾಗಿರು..."

ಅವನು ಮಾತನಾಡುವ ರೀತಿ ನೋಡಿ ಒಳಗೆ ಏನಿದೆ ಎಂಬುದು ಅವನಿಗೆ ಗೊತ್ತಿರಬಹುದು ಎನ್ನುವ ಸಂಶಯ ನನಗೆ ಬಂತು.

ದೀಪವನ್ನು ನಾನು ನಡುಗುತ್ತಿರುವ ಪರ್ಸಿವಲ್‌ನಿಂದ ತೆಗೆದುಕೊಂಡೆ. ಪೆರ್ಸಿವಲ್ ಬೀಗದಕ್ಕೆ ಗೊಂಚಲನ್ನು ಫಿಲಿಕ್ಸ್‌ಗೆ ಕೊಟ್ಟು, "ನಾನು ಕೊಟ್ಟ ಎಚ್ಚರಿಕೆ ಜ್ಞಾಪಕದಲ್ಲಿರಲಿ" ಎಂದ. ಫೀಲಿಕ್ಸ್ ನನ್ನ ಚಾಕುವಿನಿಂದ ಮೊಹರನ್ನು ಒಡೆದು ಬೀಗದಕ್ಕೆನಿಂದ ಬೀಗ ತೆಗೆದು ಬಾಗಿಲನ್ನು ಮುಂದೆ ತಳ್ಳಿ ಒಂದು ಹೆಜ್ಜೆ ಮುಂದೆ ಇಟ್ಟು ತನ್ನ ಕಣ್ಣಮುಂದಿನ ದೃಶ್ಯ ನೋಡಿ ಜ್ಞಾನತಪ್ಪಿ ಕುಸಿದು ಬಿದ್ದ.

ಏಳು ವರ್ಷಗಳಿಂದ ಗಾಳಿ ಬಿಸಿಲು ಕಾಣದಿರುವ ಕೋಣೆಯಿಂದ ಗಬ್ಬು ವಾಸನೆ ಬಂತು. ನಾನು ದೀಪವನ್ನು ಮೇಲೆ ಎತ್ತಿ ನೋಡಿದಾಗ ಅಲ್ಲಿ ಕಾಣಿಸಿದ್ದು ಸಣ್ಣ ಮೇಜು, ಅನೇಕ ಗಾಜಿನ ಬಾಟಲ್‌ಗಳು. ಕುರ್ಚಿಯ ಮೇಲೆ ಕೂತ ಒಬ್ಬ ವ್ಯಕ್ತಿಯ ಆಕಾರ ನಮ್ಮ ಕಡೆ ಬೆನ್ನು ತೋರಿಸಿ ಏನೋ ಬರೆಯುತ್ತಿರುವ ಹಾಗಿತ್ತು. ದೀಪವನ್ನು ಇನ್ನೂ ಮೇಲಕ್ಕೆತ್ತಿ ನೋಡಿದಾಗ ವ್ಯಕ್ತಿಯ ದೂಳು ತುಂಬಿದ ತಲೆ ಮೇಜಿನ ಮೇಲೆ ಕುಸಿದು, ಹಿಡಿದಿದ್ದ ಲೇಖನಿ ಬಣ್ಣ ಕೆಟ್ಟ ಕಾಗದದ ಮೇಲಿತ್ತು. ಪರ್ಸಿವಲ್, "ನನ್ನ ಧಣಿಗಳೇ" ಎಂದು ಕಿರುಚಿದ. "ಏಳು ವರ್ಷಗಳಿಂದಲೂ ಅವರಿಲ್ಲೇ ಕುಳಿತಿದ್ದಾರೆ. ನಾನು ಅವರನ್ನು ಬೇಡಿಕೊಂಡೆ. ನನ್ನ ಮಾತು ಕೇಳಲಿಲ್ಲ. ಮೇಜಿನ ಮೇಲಿರುವ ಬೀಗದಕ್ಕೆನಿಂದ ಒಳಗಿಂದ ಬಾಗಿಲನ್ನು ಭದ್ರ ಮಾಡಿದ್ದರು. ಇಲ್ಲಿರುವ ಕಾಗದ ಮೇಲೆ ಏನೋ ಸಂದೇಶ ಬೇರೆ ಇದೆ."

ನಾನು, "ಏನು! ಇದು ಮಿಸ್ಟರ್ ಸ್ಟ್ಯಾನಿಸ್ ಸ್ಟ್ಯಾನಿಫೋರ್ಡ್, ಅಯ್ಯೋ ದೇವರೇ" ಅಂತ ಉದ್ಗರಿಸಿದೆ.

"ಸರಿ ಸರಿ, ಆ ಕಾಗದ ತೆಗೆದುಕೊಂಡು ಬೇಗ ನಡೆಯಿರಿ. ಈ ಕೋಣೆಯ ಗಾಳಿ ವಿಷಪೂರಿತವಾಗಿದೆ" ಎಂದು ಹೇಳಿ ಕುಸಿದಿದ್ದ ಫೀನಿಕ್ಸ್‌ನ ಇಬ್ಬರೂ ಎತ್ತಿಕೊಂಡು ಹೊರಗೆ ಬಂದೆವು. ಫೀನಿಕ್ಸ್ ಎಚ್ಚರಗೊಂಡು, "ನನ್ನ ತಂದೆ... ನನ್ನ ತಂದೆ ಇಲ್ಲಿ ಕುರ್ಚಿಯ ಮೇಲೆ ಏಳು ವರ್ಷದಿಂದ ಸತ್ತು ಕುಳಿತಿದ್ದಾರೆ. ಪರ್ಸಿವಲ್, ನಿನಗೆ ಈ ವಿಚಾರ ತಿಳಿದಿತ್ತು. ಹಾಗಾಗಿಯೇ ನೀನು ನನಗೆ ಎಚ್ಚರಿಕೆ ಕೊಟ್ಟಿದ್ದು" ಅಂತ ಗೋಳಾಡಿದ. "ಹೌದು ನನಗೆ ಗೊತ್ತಿತ್ತು ಆದರೆ ನಾನು ಯಾರಿಗೂ ಹೇಳುವ ಹಾಗಿರಲಿಲ್ಲ. ಇದು ಧಣಿಗಳಿಗೆ ಕೊಟ್ಟ ಮಾತು, ನನ್ನನ್ನು ಕ್ಷಮಿಸು" ಎಂದ.

"ಹಾಗಾದರೆ ನನ್ನ ತಾಯಿಗೆ ಮತ್ತು ನನಗೆ ಬಂದದ್ದು ಸುಳ್ಳುಪತ್ರಗಳು ತಾನೇ?"

"ಇಲ್ಲ ಇಲ್ಲ, ನಿಮ್ಮ ತಂದೆ ಇವನ್ನು ಬರೆದು ನನಗೆ ಕೊಟ್ಟು ಸಮಯಕ್ಕೆ ಸರಿಯಾಗಿ ಪ್ಯಾರಿಸ್‌ನಿಂದ ಪೋಸ್ಟ್ ಮಾಡಿಸು ಅಂತ ಆದೇಶಿಸಿದ್ದರು. ಅವರು ನನ್ನ ಧಣಿಗಳು, ಅವರ ಮಾತನ್ನು ಪಾಲಿಸುವುದು ನನ್ನ ಕರ್ತವ್ಯವಾಗಿತ್ತು."

ನರಗಳನ್ನು ಬಲಪಡಿಸಲು ಫೀನಿಕ್ಸ್ ಒಂದು ಗುಟಗು ವಿಸ್ಕಿ ಸೇವಿಸಿ, "ನನಗೆ ಈಗ ಸ್ವಲ್ಪ ಧೈರ್ಯ ಬಂದಿದೆ, ವಿವರಿಸಿ ಹೇಳು" ಎಂದ.

"ಸಿಟಿಯಲ್ಲಿ ನಿನ್ನ ತಂದೆ ದೊಡ್ಡ ಹೂಡಿಕೆ ಮಾಡುವ ಬ್ಯಾಂಕರ್ ಆಗಿದ್ದರು. ಬಹಳ ಹೆಸರಾದಂತಹ ಪ್ರಾಮಾಣಿಕ ಮನುಷ್ಯ ಆಗಿದ್ದರಿಂದ ಅನೇಕ ಜನರು ತಮ್ಮ ಹಣವನ್ನು ಬಂಡವಾಳವನ್ನಾಗಿ ಅವರಲ್ಲಿ ಹೂಡಿದ್ದರು. ಆದರೆ, ಕ್ರಮೇಣ ದೇಶದ ಆರ್ಥಿಕ ಪರಿಸ್ಥಿತಿ ಕೆಟ್ಟು, ಷೇರು ಮಾರುಕಟ್ಟೆ ಕುಸಿದು ಉಳಿತಾಯದ ಹಣಕ್ಕೆ ಬೆಲೆ ಇಲ್ಲದಾಯಿತು. ಅನೇಕರ, ಅದರಲ್ಲೂ ಅವರ ಸ್ನೇಹಿತರ ಆರ್ಥಿಕ ಪರಿಸ್ಥಿತಿ ದುರ್ಬಲವಾಯಿತು ಮತ್ತು ಹಲವಾರು ಕುಟುಂಬಗಳು ನಾಶವೇ ಆದವು. ಇದನ್ನು ನೋಡಿ